# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 178 |
| ಸದಸ್ಯರ ಹೆಸರು | : | ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು |
| ಉತ್ತರಿಸುವ ದಿನಾಂಕ | : | 14.12.2021 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ 0–5ರವರೆಗಿನ ವಯಸ್ಸಿನ ಮಕ್ಕಳ ಪಾಲನೆ, ಘೋಷಣೆ ಮತ್ತು ನಲಿ–ಕಲಿಗೆ ಇರುವ ಒಟ್ಟು ಅಂಗನವಾಡಿ, ಬಾಲಮಂದಿರ, ಬಾಲವಿಕಾಸ ಕೇಂದ್ರ ಮುಂತಾದ ಶಿಶು ಅಭಿವೃದ್ಧಿ ಕೇಂದ್ರಗಳು ಎಷ್ಟು; ಮತ್ತು ಈ ಕೇಂದ್ರಗಳು ಯಾವ–ಯಾವ ಇಲಾಖಾ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ; (ಇಲಾಖಾವಾರು, ಜಿಲ್ಲಾವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ಮಾಹಿತಿಯನ್ನು ನೀಡುವುದು)</td><td>ರಾಜ್ಯದಲ್ಲಿ 5 ವರ್ಷದವರೆಗಿನ ವಯಸ್ಸಿನ ಮಕ್ಕಳ ಪಾಲನೆ, ಪೋಷಣೆ ಮತ್ತು ನಲಿಕಲಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀನದಲ್ಲಿ ಈ ಕೆಳಕಂಡ ಕೇಂದ್ರಗಳು ಇರುತ್ತವೆ:<br><br>1. ಅಂಗನವಾಡಿ ಕೇಂದ್ರಗಳು – ಒಟ್ಟು 66,361.<br>2. ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ಶಿಶು ಪಾಲನ ಕೇಂದ್ರಗಳು – ಒಟ್ಟು 544.<br>3. ವಿಶೇಷ ದತ್ತು ಸಂಸ್ಥೆಗಳು– ಒಟ್ಟು 37<br><br>ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ (1), (2) ಮತ್ತು (3) ರಲ್ಲಿ ಒದಗಿಸಲಾಗಿದೆ.</td></tr>
<tr><td>ಆ)</td><td>ಈ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಶಿಕ್ಷಕರು ಕಾರ್ಯಕರ್ತೆಯರು ಮತ್ತು ಸಹಾಯಕರುಗಳಿಗೆ ಪ್ರತಿ ತಿಂಗಳು ನೀಡುತ್ತಿರುವ ವೇತನ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)</td><td>ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಪ್ರತಿ ತಿಂಗಳು ನೀಡುತ್ತಿರುವ ಗೌರವಧನ ಕೆಳಕಂಡಂತಿದೆ:
<table>
<tr><th>ಕ್ರ.ಸಂ</th><th>ವಿವರ</th><th>ಮಾಸಿಕ ಗೌರವಧನ (ರೂ.ಗಳಲ್ಲಿ)</th></tr>
<tr><td>01</td><td>ಅಂಗನವಾಡಿ ಕಾರ್ಯಕರ್ತೆ</td><td>10,000.00</td></tr>
<tr><td>02</td><td>ಅಂಗನವಾಡಿ ಸಹಾಯಕಿ</td><td>5,250.00</td></tr>
<tr><td>03</td><td>ಮಿನಿ ಅಂಗನವಾಡಿ ಕಾರ್ಯಕರ್ತೆ</td><td>6,250.00</td></tr>
</table>
ಶಿಶು ಪಾಲನ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಪ್ರತಿ ತಿಂಗಳು ನೀಡುತ್ತಿರುವ ಗೌರವಧನ ಕೆಳಕಂಡಂತಿದೆ:
<table>
<tr><th>ಕ್ರ ಸಂ</th><th>ವಿವರ</th><th>ಗೌರವಧನ (ರೂ.ಗಳಲ್ಲಿ)</th></tr>
<tr><td>01</td><td>ಶಿಶು ಪಾಲನ ಕೇಂದ್ರಗಳ ಕಾರ್ಯಕರ್ತೆ</td><td>3000.00</td></tr>
<tr><td>02</td><td>ಶಿಶು ಪಾಲನ ಕೇಂದ್ರಗಳ ಸಹಾಯಕಿ</td><td>1500.00</td></tr>
</table></td></tr>
</table>

| | | |
|---|---|---|
| ಇ) | ರಾಜ್ಯದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ರಚಿಸಿದ ಕಾರ್ಯಪಡೆ ಮಾಡಿರುವ ಶಿಫಾರಸ್ಸುಗಳ ಪ್ರಕಾರ ಪೂರ್ವ ಶಿಶು ಅಭಿವೃದ್ಧಿ ಕೇಂದ್ರಗಳಲ್ಲಿ ನುರಿತ ಅಂಗನವಾಡಿ ಶಿಕ್ಷಕರು, ಕಾರ್ಯಕರ್ತರು ಮತ್ತು ಸಹಾಯಕರನ್ನು ನೇಮಿಸಲು ಮತ್ತು ಮೂಲ ಸೌಕರ್ಯಗಳಾದ ಅಂಗನವಾಡಿ ಕಟ್ಟಡ, ಕುಡಿಯುವ ನೀರಿನ ಪೂರೈಕೆ ಮುಂತಾದವುಗಳನ್ನು ಪೂರೈಸಲು ರಾಜ್ಯ ಸರ್ಕಾರ ವಿವಿಧ ಇಲಾಖೆಗಳಿಗೆ ನೀಡಿರುವ ಹೆಚ್ಚಿನ ಅನುದಾನ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. |
| ಈ) | ಒಂದು ವೇಳೆ ರಾಜ್ಯ ಸರ್ಕಾರ ಹೆಚ್ಚಿನ ಅನುದಾನ ಬಿಡುಗಡೆ ಮಾಡದಿದ್ದಲ್ಲಿ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಕ್ಕೆ ಈ ಇಲಾಖೆಗಳು ಪರ್ಯಾಯವಾಗಿ ಮಾಡಿಕೊಂಡಿರುವ ಕ್ರಿಯಾ ಯೋಜನೆಗಳು ಯಾವುವು? (ಸಂಪೂರ್ಣ ಮಾಹಿತಿ ನೀಡುವುದು) | ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಯನ್ನು ರೂಪಿಸಲು ಪರಿಶೀಲಿಸಲಾಗುತ್ತಿದೆ. |

**ಸಂಖ್ಯೆ:** ಮಮಇ 291 ಐಸಿಡಿ 2021

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

| ಅನುಬಂಧ-1 | | |
|---|---|---|
| ಜಿಲ್ಲಾ ಮತ್ತು ತಾಲ್ಲೂಕುವಾರು ಅಂಗನವಾಡಿ ಕೇಂದ್ರಗಳ ವಿವರ | | |
| ಕ್ರಮ ಸಂ. | ಜಿಲ್ಲೆ ಮತ್ತು ಯೋಜನೆಯ ಹೆಸರು | ಮಂಜೂರಾದ ಅಂಗನವಾಡಿ ಕೇಂದ್ರಗಳ ಸಂಖ್ಯೆ |
| I | **ಬಾಗಲಕೋಟೆ** | |
| 1 | ಬಾಗಲಕೋಟೆ | 327 |
| 2 | ಬೀಳಗಿ | 208 |
| 3 | ಹುನಗುಂದ | 398 |
| 4 | ಬಾದಾಮಿ | 403 |
| 5 | ಜಮಖಂಡಿ | 527 |
| 6 | ಮುದೋಳ್ | 358 |
| | **ಒಟ್ಟು** | **2221** |
| II | **ಬೆಂಗಳೂರು (ಗ್ರಾ)** | |
| 7 | ದೇವನಹಳ್ಳಿ | 264 |
| 8 | ದೊಡ್ಡಬಳ್ಳಾಪುರ | 369 |
| 9 | ಹೊಸಕೋಟೆ | 310 |
| 10 | ನೆಲಮಂಗಲ | 287 |
| | **ಒಟ್ಟು** | **1230** |
| III | **ರಾಮನಗರ** | 0 |
| 11 | ಚನ್ನಪಟ್ಟಣ | 334 |
| 12 | ಕನಕಪುರ | 335 |
| 13 | ಮಾಗಡಿ | 369 |
| 14 | ರಾಮನಗರ | 355 |
| 15 | ಹಾರೋಹಳ್ಳಿ | 150 |
| | **ಒಟ್ಟು** | **1543** |